

ಕಪ್ ಕೈಯಲ್ಲಿ ಹಿಡಿದು ಸಂಭ್ರಮಾಚರಣೆ ಮಾಡುವಂತೆ ಅಭಿನಯಿಸಿದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್

ಏಷ್ಯಾ ಕಪ್ ಟ್ವೆಂಟಿ20 ಕ್ರಿಕೆಟ್ ಚಾಂಪಿಯನ್ ಆಗಿ ಭಾರತ ಹೊರಹೊಮ್ಮಿದ ಗಳಿಗೆಯು ರಸಕ್ಷಣಗಳನ್ನು ಕೊಡುವ ಬದಲು ಅತ್ಯಭಿನಯದ ವೇದಿಕೆಯಾದದ್ದು ಸಜ್ಜನರ ಆಟ ಕ್ರಿಕೆಟ್ ಮಟ್ಟಿಗೆ ತಲೆತಗ್ಗಿಸುವ ಸಂಗತಿ. ಇದನ್ನು ನೋಡಿ 'ಥೇ...ಥೀ' ಎಂದು ಉದ್ಗರಿಸದೇ ವಿಧಿಯಿಲ್ಲ.

■ ವಿಶಾಖ ಎನ್.

# ಅಭಿನಯಶೂರರ ಅಟ್ಟಹಾಸದಲ್ಲಿ ಮಣ್ಣಾದ ಕ್ರೀಡಾಸ್ಫೂರ್ತಿ

ಸೂರ್ಯಕುಮಾರ್ ಯಾದವ್ ಕಪ್ ಹಿಡಿದೆತ್ತಿ, ಸಹ ಆಟಗಾರರ ನಡುವೆ ಕುಳಿತು ಸಂಭ್ರಮಾಚರಣೆ ಮಾಡುವಂತೆ ಅಭಿನಯಿಸಿದರು. ಅವರ ಕೈಲಿ ಕಪ್ ಇರಲಿಲ್ಲ. ಏಷ್ಯಾ ಕ್ರಿಕೆಟ್ ಸಂಸ್ಥೆ ಅಧ್ಯಕ್ಷರೂ ಆಗಿರುವ ಪಾಕಿಸ್ತಾನದ ಗೃಹ ಸಚಿವ ಮೊಹ್ಸಿನ್ ನಕ್ವಿ ಅದನ್ನು ಎತ್ತಿಕೊಂಡು ಹೋಟೆಲ್ ಕೋಣೆಗೆ ಹೋಗಿಬಿಟ್ಟಿದ್ದರು. ನಕ್ವಿ ಅವರಿಂದ ಪ್ರಶಸ್ತಿ ಸ್ವೀಕರಿಸುವುದಿಲ್ಲ ಎಂದು ಸೂರ್ಯಕುಮಾರ್ ಪಟ್ಟುಹಿಡಿದ ಪರಿಣಾಮವೇ ಆ ಅಭಿನಯ ಹಾಗೂ ನಕ್ವಿ ಕಪ್ ಹೊತ್ತೊಯ್ದ ವಿಲಕ್ಷಣ ಪ್ರಸಂಗ.

ಭಾರತ ಕ್ರಿಕೆಟ್ ತಂಡವು ಟ್ವೆಂಟಿ20 ಏಷ್ಯಾ ಕಪ್ ಕ್ರಿಕೆಟ್ ಚಾಂಪಿಯನ್ ಆದದ್ದಕ್ಕೆ ಪಟಾಕಿ ಸಿಡಿಸಿದವರಲ್ಲೂ ಈ ಸಲ ಮೊದಲಿನ ಉತ್ಸಾಹ ಇರಲಿಲ್ಲ. ಪಾಕಿಸ್ತಾನ ತಂಡವನ್ನು ಮಣಿಸಿ, ಕಪ್ ಗೆದ್ದರೂ ಮುಕ್ಕಾದ ಸಹಜ ಸಂಭ್ರಮ. ಮೇಲಾಗಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರೇ ಸಮರಕ್ಕೂ ಕ್ರಿಕೆಟ್‌ಗೂ ತಳಕು ಹಾಕುವಂತಹ ಹೇಳಿಕೆ ಕೊಟ್ಟುಬಿಟ್ಟರು.

ಪಾಕಿಸ್ತಾನ ಟಾಸ್ ಸೋತು ಫೈನಲ್ ಪಂದ್ಯದಲ್ಲಿ ಬ್ಯಾಟಿಂಗ್ ಮಾಡಿದಾಗ 13ನೇ ಓವರ್‌ನಲ್ಲಿ 113 ರನ್‌ಗಳಿಗೆ ಒಂದೇ ವಿಕೆಟ್ ಕಳೆದುಕೊಂಡು ಉತ್ತಮ ಸ್ಥಿತಿಯಲ್ಲಿತ್ತು. ಆಮೇಲೆ ತಾವು ಹಾಕಿದ ಕೇವಲ ಆರು ಎಸೆತಗಳಲ್ಲಿ ಕುಲದೀಪ್ ಯಾದವ್ ನಾಲ್ಕು ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಿ, ಪಾಕ್ ತಂಡದ ಸ್ಕೋರ್ ಅನ್ನು 146ಕ್ಕೆ ನಿಯಂತ್ರಿಸಿದರು. ಭಾರತದ ಬ್ಯಾಟಿಂಗ್‌ನ ಆರಂಭ ಮಂಕಾಗಿತ್ತು. 20 ರನ್‌ಗಳಾಗುವಷ್ಟರಲ್ಲಿ ಅಭಿಷೇಕ್ ಶರ್ಮಾ, ಸೂರ್ಯಕುಮಾರ್ ಯಾದವ್, ಶುಭಮನ್ ಗಿಲ್ ಮೂವರೂ ಪೆವಿಲಿಯನ್ ಸೇರಿದರು. ತಿಲಕ್ ವರ್ಮಾ ಸಂಯಮ ಬೆರೆತ ಸಮಯೋಚಿತ ಆಟವಾಡಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಜು ಸ್ಯಾಮ್ಸನ್ ಹಾಗೂ ಶಿವಂ ದುಬೆ ಅವರಿಗೆ ಬೆಂಬಲ ಕೊಟ್ಟರು. ಹ್ಯಾರಿಸ್ ರವೂಫ್ ಹಾಕಿದ 18ನೇ ಓವರ್ ಪಂದ್ಯದ ಮುಖ್ಯವಾದ ತಿರುವು. ಗೆಲುವು ಅದಲ್ಲಿಯವರೆಗೆ ಅತ್ತ, ಇತ್ತ ಎನ್ನುವಂತೆಯೇ ಇತ್ತು. ಆ ಓವರ್‌ನ ಐದು ಎಸೆತಗಳನ್ನು ರವೂಫ್ ಆಫ್‌ಸ್ಟಂಪ್‌ನಿಂದ ಸಾಕಷ್ಟು ಆಚೆಗೆ ಹಾಕುತ್ತಾ ಭಾರತದ ಬ್ಯಾಟ್ಸ್‌ಮನ್‌ಗಳನ್ನು ಕಟ್ಟಿಹಾಕಿದ್ದರು. ಕೊನೆಯ ಎಸೆತವನ್ನು ಫುಲ್‌ಟಾಸ್ ಹಾಕಿದ್ದೇ ದುಬೆ ಸಿಕ್ಸರ್‌ಗೆ ಎತ್ತಿದರು. ಅಲ್ಲಿಂದ ಪಾಕಿಸ್ತಾನದ ಮನೋಬಲ ಕಡಿಮೆಯಾಯಿತು. ಕೊನೆಯ ಓವರ್ ಹಾಕಲು ಬಂದಾಗ ರವೂಫ್ ಅವರಲ್ಲಿ ಅದಕ್ಕೂ ಹಿಂದೆ ತಾವೇ ಮಾಡಿದ್ದ ಓವರ್‌ನಲ್ಲಿ ಇದ್ದ ವಿಶ್ವಾಸವೂ ಇದ್ದಂತೆ ಕಾಣಲಿಲ್ಲ.

ದುಬೈನ ಪಿಚ್‌ನಲ್ಲಿ ಬ್ಯಾಟ್ಸ್‌ಮನ್‌ಗಳಿಗೆ ಅನುಕೂಲಕರವಾದ ವಾತಾವರಣ ಇತ್ತು. ಅದರಲ್ಲೂ ವೇಗವಾಗಿ ಬೌಲ್ ಮಾಡಿದಷ್ಟೂ ಬ್ಯಾಟ್ಸ್‌ಮನ್‌ಗಳಿಗೆ ಸ್ವರ್ಗಸದೃಶ ಅನುಭವ. ಜಸ್‌ಪ್ರೀತ್ ಬೂಮ್ರಾ ಎಸೆತಗಳನ್ನು ಸಾಹಿಬ್‌ಜಾದಾ ಫರ್ಹಾನ್ ಹಾಗೂ ಫಕರ್ ಜಮಾನ್ ಅಧಿಕಾರಯುತವಾಗಿ ಎದುರಿಸಿದ್ದೇ ಇದಕ್ಕೆ ಸಾಕ್ಷಿ. ಅಭಿಷೇಕ್ ಶರ್ಮಾ ಕೂಡ ಶಾಹಿನ್ ಶಾ ಅಫ್ರಿದಿಯನ್ನು ದಂಡಿಸಿದ್ದು ಇದಕ್ಕೆ ಇನ್ನೊಂದು ಉದಾಹರಣೆ. ಶ್ರೀಲಂಕಾ ವಿರುದ್ಧ ಸೂಪರ್‌ಓವರ್‌ವರೆಗೆ ಹೋಗಿದ್ದ 'ಸೂಪರ್ ಫೋರ್' ಹಂತದ ಪಂದ್ಯದಲ್ಲಿ ಅರ್ಷದೀಪ್ ಸಿಂಗ್ ತಮ್ಮ ನಿಧಾನಗತಿಯ ಎಸೆತಗಳಿಂದಲೇ ಪಂದ್ಯ

ಸಾಹಿಬ್‌ಜಾದಾ ಫರ್ಹಾನ್ ಹಾಗೂ ಹ್ಯಾರಿಸ್ ರವೂಫ್

